ಶ್ರೀ ಶಿವಾನಂದ ಹೆಚ್. ಕೌಜಲಗಿ.—೧೯೯೦-೯೧ರಲ್ಲಿ ೧.೩೭ ಲಕ್ಷ ರೂಪಾಯಿ ನೀಡಲಾಗಿದೆ ಎಂದು ಹೇಳುತ್ತಿದ್ದೀರಿ. ಹೋದವರ್ಷದ ಬ್ಯಾಲೆನ್ಸ್ ಏನು ಇತ್ತು, ಅದನ್ನು ಪೇಮೆಂಟ್ ಮಾಡಿದ್ದಾರೆ. ಆದರೆ ಅಲ್ಲಿ ಕೆಲಸ ಮಾತ್ರ ಆಗಿರುತ್ತಿಲ್ಲ. ಜಿಲ್ಲಾ ಪರಿಷತ್ತಿನ ವತಿಯಿಂದ ಇಂತಹ ದೊಡ್ಡ ಕಟ್ಟಡವನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಕೆಲಸ ಈ ರೀತಿ ನಿಧಾನ ಆದರೆ ೪ ಲಕ್ಷ ರೂಪಾಯಿ ಹೆಚ್ಚಾಲ್ಲಿ ಕೊಡಬೇಕಾಗುತ್ತದೆ ಜಿಲ್ಲಾ ಪರಿಷತ್ತಿನ ತಪ್ಪಿನಿಂದ ಈ ಕೆಲಸ ಹಾಗೇ ನಿಂತಿದೆ. ದಯಮಾಡಿ ಇದನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿ ಆದಷ್ಟು ಬೇಗನೆ ಕೆಲಸವನ್ನು ಮುಗಿಸಬೇಕು. ಇಲ್ಲವಾದಲ್ಲಿ ಸುಮಾರು ೪ ಲಕ್ಷ ರೂಪಾಯಿಯನ್ನು ಅನಾವಶ್ಯಕವಾಗಿ ಹೆಚ್ಚಿಗೆ ಖರ್ಚು ಮಾಡಬೇಕಾದಂತಹ ಪ್ರಸಂಗ ಸರಕಾರಕ್ಕೆ ಬರುತ್ತದೆ. ಜಿಲ್ಲಾ ಪರಿಷತ್‌ನವರು ಕೊಡುವ ೧೫ ಲಕ್ಷದಲ್ಲಿ ಎಲ್ಲಾ ಕೆಲಸ ಆಗುವುದಿಲ್ಲ. ದಯವಿಟ್ಟು ಲೋಕೋಪಯೋಗಿ ಇಲಾಖೆಗೆ ಇದನ್ನು ವಹಿಸಬೇಕೆಂದು ನನ್ನ ಸಲಹೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಸರಕಾರಿ ವೈದ್ಯಾಧಿಕಾರಿಗಳು ಖಾಸಗಿ ವೈದ್ಯ ವೃತ್ತಿ ನಡೆಸುತ್ತಿರುವುದು

೭೯. ಶ್ರೀ ಎ. ಟಿ. ರಾಮಸ್ವಾಮಿ (ಆರಕಲಗೂಡು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಸೇವೆಯಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರು ಅಧಿಕೃತವಾಗಿ ಖಾಸಗಿ ವೈದ್ಯ ವೃತ್ತಿ ನಡೆಸುತ್ತಿರುವುದರಿಂದ ರಾಜ್ಯ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತಿರುವ ರೋಗಿಗಳಿಗೆ ತೊಂದರೆಯಾಗುತ್ತಿರುವ ವಿಚಾರವು ನಿಜವಲ್ಲವೆ ?

ಆ) ಸದರಿ ಸರ್ಕಾರಿ ವೈದ್ಯರುಗಳ ಖಾಸಗಿ ವೈದ್ಯ ವೃತ್ತಿಯನ್ನು ನಿಲ್ಲಿಸುವುದಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಇ) ಹಾಗಿಲ್ಲದಿದ್ದರೆ ಸರ್ಕಾರಿ ಆಸ್ಪತ್ರೆಗೆ ಶಂಕ್ರುಸೆಗಾಗಿ ಬಂದು ಬವಣೆ ಪಡುವ ರೋಗಿಗಳ ಕಷ್ಟ ತಪ್ಪಿಸಲು ಅಗತ್ಯವಾದ ಬೇರೆ ಕ್ರಮವನ್ನು ಸರ್ಕಾರವು ತೆಗೆದುಕೊಳ್ಳುವುದೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆ).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ಟಿ. ರಾಮಸ್ವಾಮಿ.—ಮಾನ್ಯ ಸಚಿವೆಯವರು ಒಳ್ಳೆಯ ಉತ್ತರ ಕೊಟ್ಟಿದ್ದಾರೆ ಅದಕ್ಕಾಗಿ ಅವರಿಗೆ ತಮ್ಮ ಮುಖಾಂತರ ಧನ್ಯವಾದಗಳನ್ನರ್ಪಿಸುತ್ತೇನೆ. ಸರಕಾರೀ ವೈದ್ಯರುಗಳು ಈ ಸದನಕ್ಕೆ ಮತ್ತು ಸಮಾಜಕ್ಕೆ ಗೌರವ ತರುವ ಹಾಗೆ ಖಾಸಗೀ ವೈದ್ಯ ವೃತ್ತಿಯನ್ನು ನಡೆಸುತ್ತಿದ್ದಾರೆ. ಆದರೆಲ್ಲಾ ಹೆಚ್ಚಾಗಿ ಯಾವ ವೈದ್ಯರನ್ನು ಗ್ರಾಮಾಂತರ ಪ್ರದೇಶಕ್ಕೆ ಹಾಕುತ್ತಾರೆ ಅವರುತೂ ಪಟ್ಟಣಗಳಲ್ಲಿಯೇ ನೆಲೆಸಿ ಅಲ್ಲಿಯೇ ಖಾಸಗೀ ವೈದ್ಯ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿರುವ ವೈದ್ಯರೂ ಕೂಡ ನಿಗದಿತ ಸಮಯಕ್ಕೆ ಗ್ರಾಮಾಂತರ ಪ್ರದೇಶಕ್ಕೆ ಹೋಗದೆ, ಪಟ್ಟಣದಲ್ಲಿಯೇ ಹೆಚ್ಚು ಸಮಯವನ್ನು ಕಳೆಯುತ್ತಾರೆ. ಇದರಿಂದಾಗಿ ಕಡುಬಡವರಿಗೆ ಚಿಕಿತ್ಸೆ ಸರಿಯಾಗಿ ದೊರೆಯುತ್ತಿಲ್ಲ, ಸರಕಾರಕ್ಕೆ ಈ ವಿಚಾರ ಗೊತ್ತಿಲ್ಲವೇ ? ಇದನ್ನು ತಪ್ಪಿಸುವುದಕ್ಕೆ ಏನಾದರೂ ಸರಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವೇ ಕೆಲವು ವೈದ್ಯರುಗಳಿಗೆ ನೀವು ಪ್ರಾಕ್ಟೀಸ್ ಮಾಡಬಹುದೆಂದು ನಾವು ಅಪ್ಪಣೆ ಕೊಟ್ಟಿದ್ದೇವೆ. ಆದರೆ ಅವರಿಗೆ ಅವರು ತಮ್ಮ ಕೆಲಸದ ಸಮಯದಲ್ಲಿ ಹೊರಕ್ಕೆ ಹೋಗುತ್ತಾರೆಂದರೆ ಅದು ತಪ್ಪಾಗುತ್ತದೆ. ಅವರು ಹೊರಕ್ಕೆ ಆಗ ಹೋಗಬಾರದು. ಈ ವಿಚಾರದ ಬಗ್ಗೆ ನಾನು ಕೂಡ ಬಹಳ ಮಟ್ಟಿಗೆ ಮಾನಸ್ಸಿಗೆ ನೊಂದುಕೊಂಡಿದ್ದೆ-ನೆ. ಇದರ ಬಗ್ಗೆ ಪೂರ್ಣ ವಿಮರ್ಶೆ ಮಾಡುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ.

ಶ್ರೀ ಎ. ಟಿ. ರಾಮಸ್ವಾಮಿ.—ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ ಗ್ರಾಮಾಂತರ ಪ್ರದೇಶಕ್ಕಿಂತ ಹೆಚ್ಚು ಪಟ್ಟಣ ಪ್ರದೇಶದಲ್ಲಿ ಡಾಕ್ಟರ್ಸ್‌ಗಳು ಇರುತ್ತಾರೆ. ಅವರು ಖಾಸಗಿಯಾಗಿ ಕ್ಲಿನಿಕ್‌ಗಳನ್ನು ತೆಗೆದುಕೊಂಡು ತಮ್ಮ ವೃತ್ತಿಯನ್ನು ನಡೆಸಿಕೊಂಡಿರುತ್ತಾರೆ, ನಿಗದಿತ ವೇಳೆಯಲ್ಲಿ ಅವರು ಆಸ್ಪತ್ರೆಗೆ ಬರುವುದಿಲ್ಲ. ಇದರಿಂದಾಗಿ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಕಟ್ಟು

ನಟ್ಟಾದ ಕ್ರಮ ತೆಗೆದುಕೊಳ್ಳಬೇಕು. ಯಾವುದೇ ಸ್ಪೆಷಲಿಸ್ಟ್‌ಗಳಂತೂ ಮಧ್ಯಾಹ್ನದ ಮೇಲೆ ಇರುವುದೇ ಇಲ್ಲ. ಬಾಗಿಲಲ್ಲಿ ಕ್ಲಾಸ್ ೪ ಸರ್ವೆಂಟ್ ಕೇಳಿತ್ತಿರುತ್ತಾರೆ, ಅವರನ್ನು ಕೇಳಿದರೆ ಡಾಕ್ಟರ್ ಬರುವುದು ಅನುಮಾನ ಇಂತಹ ಕಡೆ ಹೋಗಿ ಸಿಗುತ್ತಾರೆಂದು ಹೇಳುವಂತಹ ಪರಿಸ್ಥಿತಿಗೆ ಬಂದಿದೆ. ಆದ್ದರಿಂದ ದಯಮಾಡಿ ಖಾಸಗಿಯಾಗಿ ಸರಕಾರೀ ವೈದ್ಯರುಗಳು ಸೇವೆ ಏನು ಸಲ್ಲಿಸುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಒಂದು ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರಕಾರಕ್ಕೆ ಆಸಕ್ತಿ ಇದೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :— ಆತಂಕ ಏನೂ ಇಲ್ಲ. ನಾವೇ ಪರ್ಮಿಷನ್ ಕೊಟ್ಟಿರುವುದರಿಂದ ಬೇರೆ ಕಡೆ ಹೋಗಿ ಪ್ರಾಕ್ಟೀಸ್ ಮಾಡುತ್ತಾರೆ. ಆದೂ ಸಿಟಿಯಲ್ಲಿ ಮಾಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅವರು ಬೇರೆ ಕಡೆ ಹೋಗಿ ಪ್ರಾಕ್ಟೀಸ್ ಮಾಡುವುದಕ್ಕೆ ಖಾಸಗೀ ನರ್ಸಿಂಗ್ ಹೋಂಗಳು ಇರುವುದಿಲ್ಲ. ಆದರೂ ಯಾರಾದರೂ ಹೋಗಿರುವುದು ಕಂಡುಬಂದರೆ ಅಂತಹ ಕೇಸುಗಳು ಇದ್ದರೆ ನನಗೆ ತಾವು ತಿಳಿಸಬೇಕು ಈ ವಿಚಾರದಲ್ಲಿ ನನಗೂ ಸ್ವಲ್ಪ ಮಾಹಿತಿ ಇದೆ, ಇದನ್ನು ನಾನು ಕಟ್ಟುನಿಟ್ಟಾಗಿ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ಕೆ. ಬಿ. ಕೋಳಿವಾಡ್ ಅವರು ಗೈರುಹಾಜರಿದ್ದಾರೆ. ಈಗ ಸಿಂಧ್ಯಾ ಅವರು ತಮ್ಮ ಪ್ರಶ್ನೆ ಕೇಳಬಹುದು.

ರಾಜ್ಯದಲ್ಲಿನ ಕುಟುಂಬ ಕಲ್ಯಾಣ ಯೋಜನೆ ಬಗ್ಗೆ

೨೩೭. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

(ಅ) ೧೯೯೦–೯೧ನೇ ಸಾಲಿನಲ್ಲಿ ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಕುಂಠಿತವಾಗಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ಯಾವ ಪ್ರಮಾಣದಲ್ಲಿ ಕುಂಠಿತವಾಗಿದೆ ?

(ಇ) ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ) ಹೌದು.

(ಆ) ೧೯೯೦–೯೧ನೇ ಸಾಲಿನ ಪ್ರಗತಿಯನ್ನು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಾಗ ಕಸ್ತ್ರ ಚಿಕಿತ್ಸೆಯಡಿಯಲ್ಲಿ ಶೇ. ೩.೯ ವಂಕಿ ಅಳವಡಿಸುವಲ್ಲಿ ಶೇ. ೦.೯ ಮತ್ತು ನಂಗುವ ಪಾತ್ರೆ ಯಂಡಿಯಲ್ಲಿ ಶೇ. ೪.೨ ಕಡಿಮೆಯಾಗಿದೆ. ನಿರೋಧ್ ಬಳಸುವವರ ಕಾರ್ಯಕ್ರಮದಡಿಯಲ್ಲಿ ಪ್ರಗತಿ ಶೇ. ೦.೮ ರಷ್ಟು ಹೆಚ್ಚಿದೆ. ಜಿಲ್ಲಾವಾರು ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

(ಇ) ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

೧. ಪುರುಷ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಪಡುವವರಿಗೆ ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿಯಾಗಿ ರೂ. ೫೦–೦೦ ಪ್ರೋತ್ಸಾಹ ಧನವನ್ನು ಮತ್ತು ಮಹಿಳಾ ಸಂತಾನಹರಣ ಶಸ್ತ್ರಚಿಕಿತ್ಸೆ ಗೊಳಗಾಗುವವರಿಗೆ ಹೆಚ್ಚುವರಿ ರೂ. ೧೦ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

೨. ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಪುನರ್ಮೊಲಿಸುವ ಇಲಾಖೆಯ ಮತ್ತು ಇಲಾಖೇತರ ಸಿಬ್ಬಂದಿಯವರಿಗೆ ಮತ್ತು ಸಾರ್ವಜನಿಕರಿಗೆ ಒಂದು ವರ್ಷದಲ್ಲಿ ಒಟ್ಟು ಕೇಸುಗಳಿಗನುಸಾರವಾಗಿ ಪ್ರತಿ ಕೇಸಿಗೆ ರೂ. ೧೫ ರಿಂದ ೬೦ ರವರೆಗೆ ಪ್ರೇರೇಪಣೆ ಧನವನ್ನು ನೀಡಲಾಗುವುದು.